ಆ) ಹುಬ್ಬಳ್ಳಿ ಅರ್ಬನ್ ಡಿಸ್ಟ್ರಿಬ್ಯೂಷನ್ ಇಂಪ್ರೂವ್‌ಮೆಂಟ್ ಸ್ಕೀಂ ನಡಿಯಲ್ಲಿ ಗೋಪನಕೊಪ್ಪ ಮತ್ತು ನವನಗರಗಳಲ್ಲಿ 110 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್‌ಗಳ ನಿರ್ಮಾಣ.

ಇ) ಪವರ್ ಹೌಸ್ ಕಾಂಪೌಂಡ್ ಮತ್ತು ಕೈಗಾರಿಕಾ ಪ್ರದೇಶಗಳಲ್ಲಿರುವ 33:11 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್‌ಗಳಲ್ಲಿ ತಲಾ 5 ಎಂ.ವಿ.ಎ. ಸಾಮರ್ಥ್ಯದ ಒಂದೊಂದು ಪವರ್ ಟ್ರಾನ್ಸ್‌ಫಾರ್ಮರ್‌ಗಳನ್ನು ಹೆಚ್ಚುವರಿಯಾಗಿ ಸ್ಥಾಪಿಸುವುದು.

ಈ) ತರಿಹಾಳ 110 ಕೆ.ವಿ. ವಿದ್ಯುತ್ ಉಪ ಕೇಂದ್ರದಲ್ಲಿ 10 ಎಂ.ವಿ.ಎ. ಸಾಮರ್ಥ್ಯದ 110 : 33 ಕೆ.ವಿ. ಪವರ್ ಟ್ರಾನ್ಸ್ಫಾರ್ಮರ್‌ನ್ನು 20 ಎಂ.ವಿ.ಎ. ಸಾಮರ್ಥ್ಯದ 110:33ಕೆ.ವಿ. ಪವರ್ ಟ್ರಾನ್ಸ್ಫಾರ್ಮರ್ ಮೂಲಕ ಬದಲಾಯಿಸುವುದು.

ಉ) ವಿತರಣಾ ವ್ಯವಸ್ಥೆಯಲ್ಲಿ ಹೆಚ್ಚುವರಿಯಾಗಿ 28 ವಿತರಣಾ ಟ್ರಾನ್ಸ್ಫಾರ್ಮರ್ ಕೇಂದ್ರಗಳ ಸ್ಥಾಪನೆ ಮತ್ತು 48 ಕಡಿಮೆ ಸಾಮರ್ಥ್ಯದ ವಿತರಣಾ ಟ್ರಾನ್ಸ್ಫಾರ್ಮರ್‌ಗಳನ್ನು ಹೆಚ್ಚಿನ ಸಾಮರ್ಥ್ಯದ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಮೂಲಕ ಬದಲಾಯಿಸುವುದು.

ಊ) ಹುಬ್ಬಳ್ಳಿ ನಗರದಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ, ನಗರಕ್ಕೆ ಅಗತ್ಯವಿರುವ ಸುಮಾರು 95 ಎಂ.ವಿ.ಎ.ನಷ್ಟು ವಿದ್ಯುತ್ತನ್ನು ಸರಬರಾಜು ಮಾಡಲು ಯೋಜಿಸಿದ್ದು. ವಿದ್ಯುತ್ ಉಪಕೇಂದ್ರವಾರು ವಿವರಗಳು ಕೆಳಿಕಂಡಂತಿದೆ.

ಕ್ರ. ಸಂ.	ವಿದ್ಯುತ್ ಉಪ ಕೇಂದ್ರ	ಯೋಜಿತ ವಿದ್ಯುತ್ ಸರಬರಾಜಿನ ಪ್ರಮಾಣ
1.	ಶರಾವತಿ ರಿಸೀವಿಂಗ್ ಸ್ಟೇಷನ್	20 ಎಂ.ವಿ.ಎ.
2.	ತರೀಹಾಳ್	10 "
3.	ಗೋಪನಕೊಪ್ಪ	20 "
4.	ಕೈಗಾರಿಕಾ ಪ್ರದೇಶ	15 "
5.	ಪವರ್ ಹೌಸ್ ಕಾಂಪೌಂಡ್	10 "
6.	ನವನಗರ	20 "
	ಒಟ್ಟು	95 ಎಂ.ವಿ.ಎ.

ಹುಬ್ಬಳ್ಳಿ ನಗರದಲ್ಲಿ ಪಶು ವೈದ್ಯ ಆಸ್ಪತ್ರೆಗಳು

2388 - ಶ್ರೀ ಅಶೋಕ್ ಕಾಟ್ಪೆ (ಹುಬ್ಬಳ್ಳಿ ನಗರ) : ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರದಲ್ಲಿ ಎಷ್ಟು ಪಶು ವೈದ್ಯ ಆಸ್ಪತ್ರೆಗಳಿವೆ?

ಆ) ಅಲ್ಲಿ ಜಾನುವಾರುಗಳಿಗೆ ನೀಡಬೇಕಾದ ಅಗತ್ಯ ಚಿಕಿತ್ಸಾ ಸೌಲಭ್ಯಗಳಿವೆಯೇ?

ಇ) ಪರಿಣಿತ ವೈದ್ಯರ ಸಿಬ್ಬಂದಿ ಇದ್ದಾರೆಯೇ?

ಈ) ನಗರವು ಬೆಳೆಯುತ್ತಿದ್ದು, ಸುತ್ತೆಲ್ಲಾ ಹಳ್ಳಿಯ ಜನರು ಇಲ್ಲಿಗೆ ಬರುವುದರಿಂದ, ಇನ್ನೂ ಒಂದು ಸುಸಜ್ಜಿತ ಆಸ್ಪತ್ರೆ ನೀಡಲು ಸರ್ಕಾರ ಸಿದ್ದವಿದೆಯೇ?

ಉ) ಈಗ ನ್ಯೂ ಇಂಗ್ಲೀಷ್ ಸ್ಕೂಲ್ ಹತ್ತಿರ ಇರುವ ಪಶುವೈದ್ಯ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ, ಆಧುನೀಕರಣಗೊಳಿಸುವ ಯೋಜನೆ ಸರ್ಕಾರಕ್ಕಿದೆಯೇ?

ಶ್ರೀ ಬಿ.ಎನ್. ಬಚ್ಚೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು) :

ಅ) 4

ಆ) ಹೌದು.

ಇ) ಹೌದು

ಈ) ಈಗಾಗಲೇ ಒಂದು ಸುಸಜ್ಜಿತ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿರುವುದರಿಂದ, ಮತ್ತೊಂದು ಆಸ್ಪತ್ರೆಯ ಅವಶ್ಯಕತೆ ಇರುವುದಿಲ್ಲ.

ಉ) ಸದರಿ ಪಶುವೈದ್ಯ ಆಸ್ಪತ್ರೆಯನ್ನು ಜಿಲ್ಲಾ ಮಟ್ಟದ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಆಸ್ಪತ್ರೆಯಲ್ಲಿ ಆಧುನೀಕ ರೀತಿಯಲ್ಲಿ ಶಸ್ತ್ರ ಚಿಕಿತ್ಸಾ ವಿಭಾಗವನ್ನು ಹಾಗೂ ಕ್ಷ-ಕಿರಣ (ಎಕ್ಸ್-ರೇ) ಘಟಕವನ್ನು ಪ್ರಾರಂಭಿಸಿದ್ದು, ಈಗಾಗಲೇ ಇವುಗಳು ಕಾರ್ಯನಿರ್ವಹಿಸುತ್ತಿದೆ.

ಜಿಲ್ಲಾವಾರು ರೋಜಗಾರ್ ಯೋಜನೆಯ ಬಗ್ಗೆ

1762 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1992-93, 93-94 ಮತ್ತು 1994-95ರಲ್ಲಿ ಜಿಲ್ಲಾವಾರು ರೋಜ್‌ಗಾರ್ ಯೋಜನೆಯಲ್ಲಿ ಶೇಕಡಾ 80 ಹಾಗೂ 20ರಲ್ಲಿ ನಿಗದಿಗೊಳಿಸಿದ, ಬಿಡುಗಡೆ ಮಾಡಿದ ವೆಚ್ಚ ಮಾಡಿದ ಹಾಗೂ ವರ್ಷದ ಕೊನೆಗೆ ವೆಚ್ಚವಾಗದೆ ಉಳಿದ ಹಣವೆಷ್ಟು.*

ಆ) *1995-96ರಲ್ಲಿ ರೋಜ್‌ಗಾರ್ ಯೋಜನೆಯಲ್ಲಿ ಜಿಲ್ಲಾವಾರು ನಿಗದಿಗೊಳಿಸಿದ ಬಿಡುಗಡೆ ಮಾಡಿದ ಹಾಗೂ ವೆಚ್ಚ ಮಡಿದ ಮೊತ್ತವೆಷ್ಟು?*

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) (ಲಕ್ಷ ರೂ.ಗಳಲ್ಲಿ)

ವರ್ಷ	ನಿಗದಿ ಮಾಡಿದ ಹಣ	ಬಿಡುಗಡೆ ಮಾಡಿದ ಹಣ	ಖರ್ಚು ಮಾಡಿದ ಹಣ	ಉಳಿಕೆ ಹಣ
1992-93	11763.33	14252.55	12533.912	1718.638
1993-94	16531.34	16480.31	17571.233	(-)1090.923
1994-95	19068.33	19342.49	18332.338	1010.152

ಜಿಲ್ಲಾವಾರು ಮಾಹಿತಿಯನ್ನು ತಃಖ್ತೆಯಲ್ಲಿ ಒದಗಿಸಿದೆ.